ನಾಗಪ್ರತಿಷ್ಠೆ ಮಾಡಿಸಿ ಎನ್ನುವ ವೈದಿಕರ ಮಾತುಗಳು ಚೇತನ ತುಂಬುವಂತಿದ್ದವು. ಗುರುಗಳ ಆಶೀರ್ವಾದವು ಆಗಿತ್ತು. ಈ ನಡುವೆ ಅವರಿಗೆ ನೋವು ತಂದ ಸಂಗತಿ ಎಂದರೆ ಹಿರಿಯ ಗುರುಗಳು ದೈವಾಧೀನರಾಗಿದ್ದು. ಕಿರಿಯ ಸ್ವಾಮಿಗಳ ಪೀಠಾರೋಹಣ ಸಮಾರಂಭದಲ್ಲಿ ಕಾರ್ತೀಕನದೇ ಮೇಲ್ವಿಚಾರಣೆ. ಕಿರಿಯ ಸ್ವಾಮಿಗಳು ಬಂದವರೇ ಭಕ್ತವೃಂದವನ್ನ ಹೆಚ್ಚಿಸುವ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿದ್ದರಿಂದ ಅವರ ತಿರುಗಾಟವೇ ಅಧಿಕವಾಗಿತ್ತು. ಹಾಗಾಗಿ ಕಾರ್ತೀಕನ ಹೆಚ್ಚಿನ ಸಮಯ ಮಠದಲ್ಲಿಯೇ ಕಳೆದು ಹೋಗುತ್ತಿತ್ತು.

★★★

ಮಲೆನಾಡಿಗೆ ಮತ್ತೆ ಮಳೆಗಾಲ ಕಾಲಿಟ್ಟಿತ್ತು.

ಹಕ್ಕಿಗಳಿರಲಿ, ಸರೀಸೃಪಗಳೂ ರಕ್ಷಣೆ ಪಡೆಯಲು ಸೂರು ಹುಡುಕುವಂತಹ ನಿಲುಗಡೆ ರಹಿತ ಮಳೆ ನಾಲ್ಕು ದಿನಗಳಿಂದ ಸುರಿಯುತ್ತಿತ್ತು. ರಾತ್ರಿಯಾಗುತ್ತಲೆ ಹಪ್ಪರೆಹಾವು, ಹುಲಿಸಾಲಿಂಗ, ಚೇಳು ಮುಂತಾದ ವಿಷಜಂತುಗಳು ಬಂದಾವೆಂದು ಬಾಗಿಲು ಕಿಟಕಿಗಳನ್ನೆಲ್ಲ ಮುಚ್ಚಿ ವಿಷ್ಣುಸಹಸ್ರನಾಮ ಓದಿಮುಗಿಸಿ, ರುಕ್ಮಿಣಿಯೊಟ್ಟಿಗೆ ಟೀವಿಯಲ್ಲಿ ಧಾರಾವಾಹಿಯನ್ನ ನೋಡುತ್ತ ಕುಳಿತಿದ್ದಾಗ ಬಾಗಿಲು ತಟ್ಟಿದ ಸದ್ದು. ಟೀವಿಯಲ್ಲಿ ಮುಳುಗಿದ್ದರಿಂದ ಬಾಗಿಲು ತಟ್ಟಿದ ಸದ್ದು ಕೇಳಿಸಲಿಲ್ಲ. ಅಡುಗೆ ಮನೆಯಲ್ಲಿದ್ದ ಗೀತಾಳೇ ಕೂಗಿ ಎಚ್ಚರಿಸಿದಳು. ಎದ್ದು ಬಾಗಿಲು ತೆರೆದರೆ ಎದುರಿಗೆ ಹಸುಗೂಸನ್ನೆತ್ತಿಕೊಂಡು ನಿಂತಿದ್ದ ಮಗಳು ರೋಹಿಣಿ. ಏನು ಮಾಡಬೇಕು ಎನ್ನುವುದೇ ಅರ್ಥವಾಗದೆ ಮರಗಟ್ಟಿದಂತೆ ನಿಂತಿದ್ದ ಭಟ್ಟರ ಬಳಿಗೆ, ಬಂದವರು ಯಾರಿರಬಹುದು ಎಂದು ನೋಡಲು ಬಂದ ರುಕ್ಮಿಣಿಗೂ ಆಶ್ಚರ್ಯವಾಯಿತು. 'ನಿಮ್ಮ ದೃಷ್ಟಿಯಲ್ಲಿ ಪಾಪಿಯಾಗಿರುವ ಈ ಮಗಳು ಒಳಗೆ ಬರಬಹುದೆ ಅಥವಾ ಮರಳಬೇಕೇ ಅಪ್ಪ?' ರೋಹಿಣಿಯೇ ಕಟುವಲ್ಲವಾದರೂ ಸ್ಪಷ್ಟ ದನಿಯಲ್ಲಿ ಕೇಳಿದಾಗ ತಗ್ಗಿದ ದನಿಯಲ್ಲಿ 'ಹುಂ, ಬಾ' ಎನ್ನುತ್ತ ಬದಿಗೆ ಸರಿದರು. ಬಿಳಿಬಣ್ಣದ ಬೆಚ್ಚನೆಯ ಮಲ್‌ಬಟ್ಟೆ ಹೊದೆಸಿದ್ದ ಮಗುವನ್ನ ತಂದು ಸೋಫಾದ ಮೇಲೆ ಆಕೆ ಮಲಗಿಸುವ ಹೊತ್ತಿಗೆ ಬದಿಯ ನ್ಯಾಲೆಯಲ್ಲಿ ತೂಗು ಹಾಕಿದ್ದ ಟವೆಲನ್ನ ತಂದು ಮಗಳಿಗೆ ಮಳೆ ಹನಿ ಸೀರಿ ಒದ್ದೆಯಾಗಿದ್ದ ತಲೆ, ಕೈ ಒರೆಸಿಕೊಳ್ಳಲು ಕೊಟ್ಟಳು ರುಕ್ಮಿಣಿ. ಶಾಂತವಾಗಿ ಕಣ್ಣುಮುಚ್ಚಿ ಮಲಗಿದ್ದ ದುಂಡನೆಯ ಮುಖದ ಮಗುವನ್ನೇ ನೋಡುತ್ತಿದ್ದ ಭಟ್ಟರಿಗೆ ತಮ್ಮ ಮನಸ್ಸಿನಲ್ಲಿ ಆಗುತ್ತಿರುವುದು ಹರ್ಷವೋ, ಗೊಂದಲವೋ, ತಲ್ಲಣವೋ ಅರ್ಥವಿಸಿಕೊಳ್ಳಲಾಗಲಿಲ್ಲ. ಆ ಕ್ಷಣದಲ್ಲಿಯೆ ತೆರೆದಿಟ್ಟಿದ್ದ ಬಾಗಿಲಿನಿಂದ ಮತ್ತ್ಯಾರೋ ಬಂದ ಅರಿವಾಗಿ ನೋಡಿದರೆ ಆತ ತಲೆ ತಗ್ಗಿಸಿ ಒಳಗೆ ಅಡಿಯಿಟ್ಟಿದ್ದ. 'ನಿಲ್ಲು' ಅನ್ನಲೆ ಎಂದು ಒಂದರೆಕ್ಷಣ ಯೋಚಿಸಿದವರು ಬಂದವನು ಅತಿಥಿಯಷ್ಟೆ ಎಂದು ಪರಿಭಾವಿಸಬೇಕು ಅಂದುಕೊಳ್ಳುತ್ತ 'ಕುಳಿತುಕೊಳ್ಳಿ' ಎಂದರು ಗಂಭೀರವಾಗಿ. ನೀವಿಬ್ಬರೂ ಮೊದಲು ಕುಳಿತುಕೊಳ್ಳಿ ಅಪ್ಪ ಎನ್ನುತ್ತ ಅವರ ಕಾಲಿಗೆರಗಿದ ರೋಹಿಣಿ ರಫೀಕನಿಗೂ ಹಾಗೇ ಮಾಡುವಂತೆ ಸೂಚಿಸಿ ಬಳಿಕ ಮಲಗಿಸಿದ ಮಗುವಿನ ಪಕ್ಕದಲ್ಲಿಯೆ ಕುಳಿತಳು.

ಕಾರ್ತೀಕನಿನ್ನೂ ಮನೆಗೆ ಬಂದಿರಲಿಲ್ಲ. ತಾನಿವರನ್ನ ಮನೆಯೊಳಗೆ ಕರೆದದ್ದು ತಪ್ಪೋ ಸರಿಯೋ ಎನ್ನುವ ಗೊಂದಲದಲ್ಲಿಯೇ ಭಟ್ಟರಿದ್ದರು. ಅಷ್ಟರಲ್ಲಿಯೆ ಹೊರಬಂದ ಗೀತಾ, 'ಓ ಅತ್ತಿಗೆ, ಮಳೆಯಲ್ಲಿಯೇ ಬಂದಿರಾ, ಪಾಪುಗೂ ಮಳೆ ತಾಗಿತೇನೋ, ಬೇಕಾದರೆ ಒಳಗೆ ತಂದು ಮಲಗಿಸಿ... ನಿಮಗೆ ಕುಡಿಯಲು ಬಿಸಿಬಿಸಿ ಕಾಫಿ ತರುತ್ತೇನೆ' ಎನ್ನುತ್ತ ಅಡುಗೆ ಮನೆಗೆ ಓಡಿಹೋದಾಗ, ಛೆ, ಹೊರಗಿನಿಂದ ಬಂದ ಸೊಸೆಯೆ ಇಷ್ಟು ಸಹಜವಾಗಿರಬೇಕಾದರೆ, ತಾನು ಹೆತ್ತ ಮಗಳನ್ನ ಮಾತಾಡಿಸದೆ ಸುಮ್ಮನಿದ್ದೇನಲ್ಲ ಎಂದು ಅನ್ನಿಸಿದ್ದೆ, 'ಚನ್ನಾಗಿದ್ದೀಯೇನಮ್ಮ' ಎಂದರು ಮಗಳನ್ನ ಕುರಿತು.

ಮೌನದ ಇಬ್ಬನಿ ನಿದನಿಧಾನ ಕರಗತೊಡಗಿದಂತೆ ರೋಹಿಣಿ ಹೇಳಿದಳು – 'ನಿಮಗೆ ನನ್ನಿಂದ ಎಷ್ಟು ಬೇಸರ ಆಗಿದೆ ಎನ್ನುವುದು ಗೊತ್ತು ಅಪ್ಪ. ಈ ವಯಸ್ಸಿನಲ್ಲಿ ನಿಮ್ಮನ್ನೆಂಥ ಧರ್ಮಸಂಕಟಕ್ಕೆ ದೂಡಿದೆ